ದಿನಾಂಕ 03-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 5ನೇ ಪ್ರತಿವಾದಿ ಪರಃ ಶ್ರೀ. ಕೆ.ಆರ್.ಎ.ವಕೀಲರಿಂದಃ**

ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ ಅವರು ನನ್ನ ತಂದೆಗೆ ಪರಿಚಯದವರು. ವ್ಯವಹಾರವನ್ನು ನಾನು ಬ್ರೋಕರ್ ಮೂಲಕ ಮಾಡಿದ್ದೇನೆ. ಬ್ರೋಕರ್ ಹೆಸರು ವಸಂತ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅಗ್ರಿಮೆಂಟ್/ ನಿ.ಪಿ.1 ರಲ್ಲಿ ಕಾಣುವ ಸಾಕ್ಷಿ ವಸಂತ ಎಂದರೆ ಅವರೇ. ಅಗ್ರಿಮೆಂಟ್ ಗೆ ಸಂಬಂಧಿತ ಮಾತುಕತೆಗಳನ್ನು ವಸಂತ ರವರ ಮುಖಾಂತರ 1 ಮತ್ತು 7ನೇ ಪ್ರತಿವಾದಿಯ ಜೊತೆ ಮಾಡಲಾಗಿದೆ. ಯಾವ ಜಾಗದಲ್ಲಿ ಎಂದು ನನಗೆ ನೆನಪಿಲ್ಲ.

ನಾನು 1ನೇ ಪ್ರತಿವಾದಿಯನ್ನು ಪ್ರಪ್ರಥವಾಗಿ ಅಗ್ರಿಮೆಂಟ್ ಆಗುವಾಗ ನೋಡಿದ್ದೇನೆ. ಅವರು ವಿಧವೆಯಾಗಿದ್ದು ಅವರ ಗಂಡ ಯಾವಾಗ ಮೃತರಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿಯ ಮಗ ಪವನ್ ಇದ್ದಾನಾ ಎಂದು ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿಯನ್ನು ನಾನು ಕಂಡು ಮಾತನಾಡಿಸಿದ್ದೇನೆ. ಜಾಗವನ್ನು ಅಳತೆ ಮಾಡುವ ಸಮಯದಲ್ಲಿ ಮಾತನಾಡಿಸಿದ್ದೇನೆ. ಪವನ್ ಸತ್ತುಹೋಗಿರುವ ವಿಚಾರ ನನಗೆ ನೀವು ಹೇಳಿದ ಕಾರಣ ಗೊತ್ತಾಗಿದೆ.

ನಿ.ಪಿ.1 ರಲ್ಲಿ ಕಾಣುವ 2ನೇ ಸಾಕ್ಷಿ ಶಿವಪ್ರಸಾದ್ ಎನ್ನುವವರು ನಾಗಣ್ಣಗೌಡರ ಅಣ್ಣನ ಮಗ. ನನಗೆ ನಿ.ಪಿ.1 ರಲ್ಲಿ ಕಾಣುವ ಸಾಕ್ಷಿಗಳ ಜೊತೆ ಸೌಹಾರ್ದ ಸಂಬಂಧ ಇದೆ . ಯಾವುದೇ ವಿವಾದಗಳು ಇಲ್ಲ.

ವಿವಾದಿತ ಭೂಮಿ 2 ಎಕರೆ 48 ಸೆಂಟ್ಸ್ ಅದಕ್ಕೆ ಲಗತ್ತಿಯಾಗಿ ಸ್ವಲ್ಪ ಪ್ರಮಾಣದಲ್ಲಿ ಸರ್ಕಾರಿ ಭೂಮಿ ಇದೆ. ಅದರ ವಿಸ್ತೀರ್ಣ ಗೊತ್ತಿಲ್ಲ. ಆ ಜಾಗದಲ್ಲಿ ಮೊದಲು ಕೃಷಿ ಇರಲಿಲ್ಲ , ಪ್ರಸ್ತುತ ನಾವು ಮಾಡಿಸಿದ್ದೇವೆ. ನಮಗೆ ಅಗ್ರಿಮೆಂಟ್ ಆದ ಮೇಲೆ ಸ್ವತ್ತಿನ ಸ್ವಾಧೀನ ಬಂದಿದೆ. ಅಗ್ರಿಮೆಂಟ್ ನೋಟರಿ ಶ್ರೀ. ರಮೇಶ್ ಎನ್ನುವವರು ತಯಾರಿಸಿದ್ದಾರೆ. ಅದಕ್ಕೆ ಬೇಕಾದ ಸ್ಟಾಂಪ್ ಪೇಪರ್ ಯಾರು ತೆಗೆದಿದ್ದು ಎಂದು ನೆನಪಿಲ್ಲ. ಅಗ್ರಿಮೆಂಟ್ ಆಗುವಾಗ 1ನೇ ಪ್ರತಿವಾದಿ ಹಾಜರಿದ್ದರು. 1ನೇ ಪ್ರತಿವಾದಿಗೆ ನಾನು ಮತ್ತು ನನ್ನ ತಂದೆ 10 ಲಕ್ಷ ನಗದು ರೂಪದಲ್ಲಿ ದುಡ್ಡು ಕೊಟ್ಟಿದ್ದೇವೆ. ನಾವು ಅಡಿಕೆ ಮಾರಿದ್ದ ಕಾರಣ ಅಷ್ಟು ಹಣ ನಮ್ಮ ಹತ್ತಿರ ಇತ್ತು.

1ನೇ ಪ್ರತಿವಾದಿಯ ಮಕ್ಕಳೆಲ್ಲಾ ಮದುವೆಯಾಗಿ ಎಲ್ಲಿ ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಹೆಣ್ಣುಮಕ್ಕಳನ್ನು ಅಗ್ರಿಮೆಂಟ್ ಆಗುವ ಸಮಯದಲ್ಲಿ ಮಾತನಾಡಿಸಿದ್ದೇನೆ. ಅವರ ಪರಿಚಯ ಆ ಮೊದಲು ಇರಲಿಲ್ಲ. ಈಗ ಅವರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಮುಖ ಪರಿಚಯ ಇರದ ಕಾರಣ ಗುರುತಿಸಲು ಆಗುವುದಿಲ್ಲ.

ನಿ.ಪಿ.1 ನ್ನು ತಯಾರು ಮಾಡಿದ ನಂತರ ನೋಟರಿ ಶ್ರೀ. ರಮೇಶ್ ರವರು ಗಡಿಬಿಡಿಯಲ್ಲಿ ಸಹಿ ಮಾಡಿಲ್ಲ. ಅವರಿಗೆ ಏಕೆ ಗಡಿಬಿಡಿ ಆಯಿತು ಎಂದು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ನೀಡಲಾಯಿತು.)

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.